ಮಂತ್ರಿಗಳ ಮನೆಯ ಮುಂದೆ ಕಿಕ್ಕಿರಿದು ತುಂಬಿದ ಜನಜಂಗುಳಿ. ಇರುವೆ ಹಾದು ಹೋಗಲೂ ಸ್ಥಳವಿರಲಿಲ್ಲ. ಜನರ ವಿಪರೀತ ನೂಕು ನುಗ್ಗಲು. ಒಬ್ಬರ ಪಾದ ಇನ್ನೊಬ್ಬರ ಮೇಲಿತ್ತು. ಬೇಸಿಗೆ ಕಾಲವಾದ್ದರಿಂದ ಬಿಸಿಲಿನ ಬೇಗೆ ಹೆಚ್ಚಾಗಿ ಎಲ್ಲರೂ ಬೆವೆತು ಹೋಗಿದ್ದರು. ಉಟ್ಟ ಬಟ್ಟೆ ಬೆವರಿನಿಂದ ತೊಯ್ದು ಜನರ ಮೈಯಿಂದ ದುರ್ವಾಸನೆ ಬರತೊಡಗಿತ್ತು. ಸಂವೇದನಾಶೀಲತೆ ಕಳೆದುಕೊಂಡ ಮೂಗೂ ಕೂಡ ಈ ದುರ್ವಾಸನೆ ಸಹಿಸದೆ ಪ್ರತಿಭಟಿಸುವಂತಿತ್ತು.

ಜನರ ಚೀರಾಟ, ಆಕ್ರಂದನ ಮುಗಿಲು ಮುಟ್ಟಿತ್ತು. ಯಾರ ಮಾತೂ ಯಾರಿಗೂ ಕೇಳಿಸದಂಥ ಪರಿಸ್ಥಿತಿ ನಿರ್ಮಾಣವಾಗಿತ್ತು. ಜನರು ದುಃಖತಪ್ತರಾಗಿದ್ದರು. ಪ್ರತಿಯೊಬ್ಬರ ಕಣ್ಣಲ್ಲಿ ನೀರು ಒಂದೇ ಸಮನೆ ಹನಿಯುತ್ತಿತ್ತು. ಮನೆಯ ಒಳಗಡೆ ಮಂತ್ರಿಗಳ ಸಂಬಂಧಿಕರ ಆಕ್ರಂದನ ಎಂಥ ಕಠೋರನ ಮನಸ್ಸನ್ನೂ ಕರಗುವಂತೆ ಮಾಡುತ್ತಿತ್ತು. ಎಲ್ಲರ ಮುಖದ ಮೇಲೆ ದುಃಖ, ವಿಷಾದ, ಅಸಹಾಯಕತೆ ಎದ್ದು ಕಾಣುತ್ತಿತ್ತು. ಏನೂ

